ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡಿ ಕಂಡ ಫಾರೆಸ್ಟ್ಸಗಳಿಂದ ಆಯಾಯ ಡಿಪೋಗಳಿಗೆ 1891ನೇ ಇಸವಿ ಮಾರ್ಚಿ 31ನೇ ತಾರೀಖಿನವರಿಗೆ ನಾಟಾ ಮತ್ತು ಬೊಂಬುಗಳನ್ನು ತಯಾರಿಯಿಂದ ಸಾಗಿಸುವಬಗ್ಯಾಗಿ ಅಥವಾ ಸಾಗಿಸುವದಕ್ಕೆ ಮಾತ್ರ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಫಾರೆಸ್ಟ್.	ಡಿಪೋ ಹೆಸರು.
ಗುಂಡ್ಲುಪೇಟೆ	ಭಂಡೀಪುರ	ಮೈಸೂರು ವುಡ್‌ಯಾರ್ಡು ಹಂಗಳ ಡಿಪೊ ಗುಂಡ್ಲುಪೇಟೆ ಡಿಪೋ
	ಬೇರಂಬಾಡಿ	ಮೈಸೂರು ವುಡ್‌ಯಾರ್ಡು ಮದ್ದೂರು ಡಿಪೊ ಗುಂಡ್ಲುಪೇಟೆ ಡಿಪೊ
ಹೆಗ್ಗಡದೇವನಕೋಟೆ	ಬೇಗೂರು	ಮೈಸೂರು ವುಡ್‌ಯಾರ್ಡುಬೇಗೂರು ಡಿಪೊ ಸರಗೂರುಡಿಪೊ
	ಐನೂರು ಮಾರಿಗುಡಿ	ಮೈಸೂರು ವುಡ್‌ಯಾರ್ಡು ಹುರದ ಡಿಪೊ ಸರಗೂರು ಡಿಪೊ
	ಕಾಕನಕೋಟೆ	ಮೈಸೂರು ವುಡ್‌ಯಾರ್ಡು ಅಂತ್ರಸಂತೆ ಡಿಪೊ
	ಮೇಟೀಕುಪ್ಪೆ	ಮೈಸೂರು ವುಡ್‌ಯಾರ್ಡು ಅಂತರ ಸಂತೆ ಡಿಪೋ
ಹುಣಸೂರು	ವೀರನ ಹೊಸಹಳ್ಳಿ	ಮೈಸೂರು ವುಡ್‌ಯಾರ್ಡು ಹುಣಸೂರು ಡಿಪೋ
	ಆನೇಚವಕೂರು	ಮೈಸೂರು ವುಡ್‌ಯಾರ್ಡು ಹುಣಸೂರು ಡಿಪೊ
	ದೊಡ್ಡಹರವೆ	ಮೈಸೂರು ವುಡ್‌ಯಾರ್ಡು ಹುಣಸೂರು ಡಿಪೊ
	ಕಚಕ್ವಿನಹಳ್ಳಿ	ಮೈಸೂರು ವುಡ್‌ಯಾರ್ಡು ಹುಣಸೂರು ಡಿಪೊ
	ಮಾವಕಲ್	ಮೈಸೂರು ವುಡ್‌ಯಾರ್ಡು ಹುಣಸೂರು ಡಿಪೊ
ಚಾಮರಾಜನಗರ	ಚಾಮರಾಜನಗರ	ಮೈಸೂರು ವುಡ್‌ಯಾರ್ಡು ಚಾಮರಾಜನಗರ ಡಿಪೊ

2. ತಮಾ೦ ದರಖಾಸ್ತುಗಳು "ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಾಟಾ ವಗೈರೆಗಳನ್ನು ಫಾರೆಸ್ಟ್ಸಗಳಿಂದ ಡಿಪೋಗಳಿಗೆ ತಯ್ಯಾರಿಯಿಂದ ಸಾಗಿಸುವ ಬಗ್ಯೆ ಅಥವ ಸಾಗಿಸುವದಕ್ಕೆ ಮಾತ್ರ ದರಖಾಸ್ತು" ಯೆಂಬದಾಗಿ ವಿಳಾಸ ಬರಿಯಲ್ಪಡತಕ್ಕದ್ದು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ 1890ನೇ ಇಸವಿ ನೇ ತಾರೀಖಿನವರಿಗೆ ಅಂಗೀಕರಿಸಲ್ಪಡುವದು.

4. ದರಖಾಸ್ತು ಮಾಡಲು ಯಿಚ್ಛೈಯುಳ್ಳ ಕಂಟ್ರಾಕ್ಟುದಾರನು ಮೇಲ್ಕಂಡ ಫಾರೆಸ್ಟ್ಸಗಳ ಪೈಕಿ ಬಂದಕ್ಕಿಂತಲೂ ಜಾಸ್ತೀ ಫಾರೆಸ್ಟ್ಸಗಳಿಂದ ಸಾಮಾನನ್ನು ತಯಾರ್ಮಾಡಿ ಸಾಗಿಸುವ ಬಗ್ಯೆ ಅಥವಾ ತಯಾರಾದದ್ದನ್ನ ಸಾಗಿಸುವದಕ್ಕೆ ಮಾತ್ರ ದರಖಾಸ್ತುಮಾಡಿದ ಪಕ್ಷದಲ್ಲಿ ಅವನು ನಾಟಾ ವಗೈರೆಯನ್ನ ಪ್ರತಿ ಬಂದು ಫಾರೆಸ್ಟಿನಿಂದಲೂ ಡಿಪೋಗಳಿಗೆ ತಯಾರೀಯಿಂದ ಸಾಗಿಸುವ ಬಗ್ಯೆ ಅಥವಾ ತಯಾರಾದದ್ದನ್ನು ಸಾಗಿಸುವದಕ್ಕೆ ಮಾತ್ರ ಒಪ್ಪಿಕೊಳ್ಳುವ ಕಮ್ಮಿ ದರವನ್ನು ಬೇರೆಬೇರೆಯಾಗಿ ನಮೂದಿಸತಕ್ಕದ್ದು. ತಯಾರಿಯು ಡಿಸ್ಟ್ರಿಕ್ಟಿನಲ್ಲಿ ಮಾಮೂಲಾಗಿ ನಡಿಯುವ ರೀತಿ ಇರತಕ್ಕದ್ದು. ಕುರುಬರಿಗೆ ಈ ಅಂಶವೂ ಚನ್ನಾಗಿ ತಿಳಿಯುವಂತೆ ಮಾಡಿಯತಕ್ಕ ಮಾರ್ಗಗಳು ಫಾರೆಸ್ಟ್ ಇಲಾಖೆಯವರಿಂದ ಗುರ್ತು ಮಾಡಲ್ಪಡುವವು.

5. ಮೊದಲೇನಾಟಾ ದರ ಅಡಿ 1ಕ್ಕೆ ಇಷ್ಟೆಂತಲೂ ಚಿಲ್ಲರೇ ಚಪ್ಪುಬೀನೆ ಮತ್ತು ಬೊಂಬುಗಳಿಗೆ ದರ ಗಾಡೀ ಬೋಜಾ 1ಕ್ಕೆ ಇಷ್ಟೆಂದು ನಮೂದಿಸತಕ್ಕದ್ದು. ದರಗಾಡಿ 1ಕ್ಕೆ ಚಿಲ್ಲರೆ ಚಪ್ಪುಬೀನೆ 25 ಸಲೆಅಕ್ಕೀ ಮೇರಿಗೂ ಬೊಂಬುಗಳು 25 150ರಂತೆಯೂ ಕಿರಬಿದರು 200ರಂತೆಯೂ (ಚಾಮರಾಜನಗರದಲ್ಲಿ ಇದ್ದು (300) ರಂತೆಯೂ) ತಯಾರಿಯಿ

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಮೈಸೂರು ವುಡ್‌ಯಾರ್ಡಿಗೆ ಜಂಗಲ್‌ನಿಂದ ಸಾಗಿಸಲು ಉದ್ದೇಸಿಸುವ ಚಪ್ಪುಬೀನೆ ನಾಟಾಗಳನ್ನು ತಯಾರೀ ತಾರೀಖು ಲಾಗಾಯತು 40 ದಿವಸಗಳ ಒಳಗಾಗಿ ಮೈಸೂರು ವುಡ್‌ಯಾರ್ಡಿಗೆ ಸಾಗಿಸುವ ಬಗ್ಯೆ ಬದ್ಧನಾಗಿರತಕ್ಕದ್ದು. ಸದರೀ 40 ದಿವಸಗಳ ಒಳಗಾಗಿ ಈ ಯಾರ್ಡಿಗೆ ತಲಪದೇ ಇದ್ದರೆ ಆತನು ಆ ಬಾಬತು ತೊಲೆಗಳ ತಯಾರೀ ಮತ್ತು ರವಾನೆ ಯಾ ಹಕ್ಕನ್ನು ಕಳದುಕೊಳ್ಳುತ್ತಾನೆ.

7. ಮೈಸೂರು ವುಡ್‌ಯಾರ್ಡಿಗೆ ಅಲ್ಲದೆ ಇತರ ಡಿಪೋಗಳಿಗೆ ರವಾನೆ ಬಗ್ಯೆ ತಯಾರಾಗುವ ಚಿಲ್ಲರೇ ಚಪ್ಪುಬೀನೆ ಮತ್ತು ಗಳು ಗಳು ಸಹಾ ತಯಾರೀ ತಾರೀಖು ಲಾಗಾಯತು 20 ದಿವಸಗಳಒಳಗೆ ಆಯಾಯ ಡಿಪೋಗಳಿಗೆ ರವಾನಿಸಲ್ಪಡತಕ್ಕದ್ದು, ಹಾಗೆ ತಪ್ಪಿದಲ್ಲಿ ತಯಾರೀ ಮತ್ತು ಕಿರಾಯದ ಹಕ್ಕನ್ನು ಕಳದುಕೊಳ್ಳತಕ್ಕದ್ದು.

8. ಪ್ರತಿ ದರಖಾಸ್ತುದಾರನೂ ಹಾಲಿ ಜಂಗಲ್‌ಗಳಲ್ಲಿ ತಯಾರಾಗಿ ಮಜೂದೀ ಸಾವತಿಯಿಂದ ಬಿದ್ದಿರುವ ಸಾಮಾನುಗಳನ್ನು ಮೈಸೂರು ಪೊಡಯಾರ್ಡಿಗೆ ಸಾಗಿಸಲು ಯಾವ ದರದಂತೆ ಒಪ್ಪಿಕೊಳ್ಳುತ್ತಾನೊ ಅವನ್ನು ಜೇರೆಯಾಗಿ ನಮೂದಿಸತಕ್ಕದ್ದು.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಖರಾರು ಮೇರಿಗೆ ಕ್ರಮವಾಗಿ ನಡಿದುಕೊಳ್ಳುವ ಬಗ್ಗೆ ಜಾಮೀನ್ ತರೀಕ್ ಫಾರೆಸ್ಟ್ 1ಕ್ಕೆ 200 ರೂಪಾಯಿ ಪ್ರಕಾರ ಡಿಪಾಜಿಟ್ ಕಟ್ಟ ತಕ್ಕದ್ದು.

10. ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಕಮ್ಮಿದರದ ಅಥವಾ ಇತರ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲವು. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟು ಯಿರುತ್ತೆ.

11. ಉದ್ದೇಶಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸನಲ್ಲಿ ಅವರು ವಿಚಾರಿಸಿ ತಿಳದುಕೊಳ್ಳಬಹುದು.

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ.

ಸ್ರ 1890ನೇ ಇಸವಿ ಜೂನ್ 1ನೇ ತಾರೀಖು ಲಾಗಾಯಿತು, ಸ್ರ1891ನೇ ಇಸವಿ ಮಾರ್ಚಿ 31ರವರಿಗೆ, ಇದರಕೆಳಗೆ ನಮೂದಿಸಿರುವ ತಾಲ್ಲೂಕುಗಳಲ್ಲಿ, ಸಂದಲ್ ಹಳೇ ಜಡಗಳನ್ನು ಕಿತ್ತು ತಯಾರೀಯಿಂದ ಬಾಜೂದಲ್ಲಿ ನಮೂದಿಸಿರುವ ಕೋಠೀಗಳಿಗೆ ಸಾಗಿಸಲು ದರಖಾಸ್ತುಗಳು ಆಪೇಕ್ಷಿಸಲ್ಪಟ್ಟವೆ.

2. ಪ್ರತಿ ದರಖಾಸ್ತುದಾರನೂ ತಾನು ಸಂದಲ್ ಹಳೇ ಜಡಗಳನ್ನು ಕಿತ್ತು ತಯಾರೀಯಿಂದ ಸಾಗಿಸಲು ಒಪ್ಪಿ ಕೊಳ್ಳುವ ಕಮ್ಮಿದರವನ್ನು ನಮೂದಿಸತಕ್ಕದ್ದು.

3. ಪ್ರತಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ಖರಾರ್‌ನಂತೆ ನಡಿದುಕೊಳ್ಳುವದಕ್ಕಾಗಿ ಪ್ರತಿ ಬಂದು ತಾಲ್ಲೂಕಿಗೂ 200 ರೂಪಾಯಿಗಳಂತೆ ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡತಕ್ಕದ್ದು. ಖರಾರ್‌ನಂತೆ ನಡಿಯದೇ ತಪ್ಪಿದಲ್ಲಿ ಈ ಮೊಬಲಗು ಗವರ್ಮೆಂಟಿಗೆ ಶೇರಿಸಿಕೊಳ್ಳಲ್ಪಡುವದು.

4. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಅಸಿಸ್ಟೆಂಟ್ ಕ್ಯಾಸರ್ವೇಟರ್ ಸಾಹೇಬರವರ ಆಫಿಸನಲ್ಲಿ 1890ನೇ ಇಸವಿ ಏಪ್ರೆಲ್ 30ನೇ ತಾರೀಖುವರಿಗೆ ಅಂಗೀಕರಿಸಲ್ಪಡುವದು.

5. ಫಾರೆಸ್ಟ್ ಅಸಿಸ್ಟೆಂಟ್ ಕ್ಯಾಸರ್ವೇಟರ್ ಸಾಹೇಬರವರು ಕಮ್ಮಿದರವುಳ್ಳ ಅಥವಾ ಇತರ ದರಖಾಸ್ತನ್ನು ಅಂಗೀಕರಿಸಲು ಬದ್ಧರಾಗಿಲ್ಲಾ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುವದು.

6. ಕಂಟ್ರಾಕ್ಟುದಾರನು ಕೋಠೀಗೆ ತರಲ್ಪಟ್ಟ ಸಂದಲ್‌ನಲ್ಲಿ ಲೆಕ್ಕಕ್ಕೆ ತರಲ್ಪಟ್ಟ ಪ್ರಮಾಣದ ಮೇಲೆ ಆರವಾಸಿ ವಗೈರೇ ಭರ್ತಿಗಾಗಿ ಶೇಕಡಾ 10 ರ್ಟ ಮೇರೆ ಹೆಚ್ಚು ತೂಕವನ್ನು ಕೊಡಲು ಬದ್ಧನಾಗಿರತಕ್ಕದ್ದು.

ಹುಣಸೂರು ತಾಲ್ಲೂಕಿನಿಂದ
ಹೆಗ್ಗಡದೇವನಕೋಟೆ ತಾಲ್ಲೂಕಿನಿಂದ
ಹುಣಸೂರು ತಾಲ್ಲೂಕು ಯಲ್ಲೀಯಿಂದ
ಮೈಸೂರು ಮಾನಂದವಾಡೀರಸ್ತೆವರಿಗೆ
ಯಡತೊರೆ,ಅತ್ತಿಕುಪ್ಪ,ನಾಗಮಂಗಲ,
ಈ ತಾಲ್ಲೂಕುಗಳಿಂದಾ,

ಹುಳಸೂರು ಕೋಠಿಗೆ.
ಡಿಟೋ
ಶ್ರೀರಂಗಪಟ್ಟಣದ ಕೋಠಿಗೆ

13—4—1890.

ಬಿ. ರಾಮಸ್ವಾಮಿ,
ಡಿ|| ಫಾರೆಸ್ಟ್ ಅಸಿಸ್ಟೆಂಟ್ ಕ್ಯಾಸರ್ವೇಟರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 31ನೇ ಮಾರ್ಚಿ 1890ನೇ ಇಸವಿ.

ಹಾಸನ ಡಿಸ್ಟ್ರಿಕ್ಟು ಮಂಜಿರಾಬಾದ್ ಸಬ್ ರಿಜಸ್ಟ್ರಾರ್ ಆಫಿಸನಲ್ಲಿ ಈ ಕೆಳಗೆ ನಮೂದಿಸುವ ಜೇವಾರಸು ದಸ್ತಾವೇಜನ್ನು ಕ್ರಮಪ್ರಕಾರ ವಾರಸ್‌ದಾರ್‌ರಾಗಲೀ ಅಥವಾ ಅವರಿಂದ ಅಧಿಕಾರ ಹೊಂದಿದ ಮುಖ್ತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸು ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷ್ಟ ಆಕ್ಟು 8ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.